ತರಗತಿ : X ಅಂಕ : 100

a) i) ರಾಜು ಮತ್ತು ರಾಮು ಇವರಿಬ್ಬರಲ್ಲಿ ನೀನು ಇಷ್ಟಪಡುವ ವ್ಯಕ್ತಿ ಯಾರು?

ii) ಏಕೆ?

b) i) ನಿನ್ನ ಪ್ರಕಾರ ಗೆಳೆಯನೆಂದರೆ ಯಾರು?

ii) ರಾಜುವಿಗೆ ನಿನ್ನ ಬುದ್ಧಿವಾದ ಏನು?

c) ರಾಜುವಿನ ನಡತೆಯ ಬಗ್ಗೆ ನಿನ್ನ ಎರಡು ಅನಿಸಿಕೆಗಳನ್ನು ಬರೆ.

2. ಒಂದು ತರಗತಿಯಲ್ಲಿ ಮೂವತ್ತೈದು ವಿದ್ಯಾರ್ಥಿಗಳಿದ್ದರು. ಶಿಕ್ಷಕಿಯು ವೈವಿಧ್ಯತೆಯಲ್ಲಿ ಏಕತೆ ಎಂಬ ಪಾಠವನ್ನು ವಿದ್ಯಾರ್ಥಿಗಳಿಗೆ ಅರ್ಥ ಮಾಡಿಸುವುದಕ್ಕಾಗಿ ಪ್ರತಿಯೊಬ್ಬರೂ ತಮ್ಮ ಮನೆಯಿಂದ ಒಂದೊಂದು ಹೂವನ್ನು ತರಬೇಕೆಂದೂ, ಎಲ್ಲರೂ ತಾವು ತಂದ ಹೂಗಳನ್ನು ಮೇಜಿನ ಮೇಲಿಡಲಾದ ದೊಡ್ಡ ಹೂ ಕುಂಡದಲ್ಲಿಡಬೇಕೆಂದೂ ಹೇಳಿದರು.

a) i) ಶಿಕ್ಷಕಿಯ ಈ ಸಲಹೆಯಿಂದ ನೀನೇನು ಕಲಿತುಕೊಂಡೆ?

ii) ವಿವಿಧ ಹೂವುಗಳು ಯಾವ ವಿಷಯವನ್ನು ಸಾರುತ್ತವೆ?

b) i) ವೈವಿಧ್ಯತೆಯಲ್ಲಿ ಏಕತೆ ಎಂದರೇನು?

ii) ವೈವಿಧ್ಯತೆಯಲ್ಲಿ ಏಕತೆ ಹೊಂದಿದ ದೇಶಕ್ಕೆ ಒಂದು ಉದಾಹರಣೆ ಕೊಡು.

c) ವೈವಿಧ್ಯತೆಯನ್ನು ಹೇಗೆ ಕಾಪಾಡಿಕೊಳ್ಳಬಹುದು? ಎರಡು ಸಲಹೆ ಕೊಡು.

3. ಸುರೇಖಾ ಮತ್ತು ವಿದ್ಯಾ ಇಬ್ಬರೂ ಸ್ನೇಹಿತೆಯರು. ತರಗತಿಯಲ್ಲಿ ಪಾಠ, ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗಳಿಸುತ್ತಿದ್ದರು. ವಿದ್ಯಾಳಿಗೆ ತಾನು ಜೀವನದಲ್ಲಿ ಮುಂದೆ ಅಬ್ದುಲ್ ಕಲಾಂರಂತೆ ದೊಡ್ಡ ವಿಜ್ಞಾನಿಯಾಗಿ ಸಾಧನೆ ಮಾಡಬೇಕೆಂಬ ಗುರಿ ಇತ್ತು. ಆದರೆ ಸುರೇಖಾ ಜೀವನದಲ್ಲಿ ಗುರಿ ಇಟ್ಟುಕೊಂಡರೆ ಏನು ಸಾಧಿಸಲಾಗುವುದಿಲ್ಲ ಎಂದು ಗೆಳತಿಯನ್ನು ಹೀಯಾಳಿಸುತ್ತಿದ್ದಳು. ವಿದ್ಯಾ ತನ್ನ ಗುರಿ ಸಾಧನೆಗಾಗಿ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಳು. ಆದರೆ ಸುರೇಖಾ ತನ್ನಿಷ್ಟ ಬಂದಂತೆ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದಳು.

a) i) ಸುರೇಖಾಳ ವರ್ತನೆ ಸರಿಯೇ?

ii) ಯಾಕೆ?

b) i) ನಿನ್ನ ಜೀವನದಲ್ಲಿನ ಗುರಿ ಯಾವುದು?

ii) ನಿನ್ನ ಜೀವನದ ಗುರಿಗೆ ಪ್ರಭಾವ ಬೀರಿದ ವ್ಯಕ್ತಿಯ ಬಗ್ಗೆ ನಿನ್ನ ಅನಿಸಿಕೆಯೇನು?

c) ನಿನ್ನ ಗುರಿ ಸಾಧನೆಗಾಗಿ ಯಾವ ರೀತಿ ಸಿದ್ಧತೆಯನ್ನು ಮಾಡಿಕೊಳ್ಳುತ್ತಿ? ವಿವರಿಸು.



# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 11–01–2014** **ಸಮಯ : $2^1/_2$ ಘಂಟೆ**

**ತರಗತಿ : X** **ಅಂಕ : 100**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ:** **10x1=10**

1. ಯಾವುದೇ ಸಮಾಜವಾಗಲಿ ಅದು ______ ವ್ಯವಸ್ಥೆಯಿಂದ ಸ್ಥಾಪಿತವಾಗಿರುತ್ತದೆ.
(ಜಾತೀಯತೆ; ಇಬ್ಬಗೆ; ರಾಜಕೀಯ)

2. ಇದು ಸಂತೋಷ ಮತ್ತು ಆರೋಗ್ಯಕರ ಜೀವನದ ಕೀಲಿಯಾಗಿದೆ ______
(ದೀನತೆ; ಸಾಮಾಜಿಕ ಪರಿಜ್ಞಾನ; ಸಂವೇದನಾ ಶೀಲತೆ)

3. ______ ಕಟ್ಟುವುದು ಮುಖಂಡನ ಆದ್ಯ ಕರ್ತವ್ಯ.
(ತಂಡ; ಸಮಾಜ; ಕುಟುಂಬ)

4. ______ ಬೆಲೆ ಕಟ್ಟಲು ವಾರಪತ್ರಿಕೆಯ ಸಂಪಾದಕರನ್ನು ಕೇಳಬೇಕು.
(ಒಂದು ದಿನಕ್ಕೆ; ಒಂದು ವಾರಕ್ಕೆ; ಒಂದು ವರ್ಷಕ್ಕೆ)

5. ಬರೆಯುವ ಮೊದಲು ______
(ಯೋಚಿಸು; ಪ್ರಯತ್ನಿಸು; ಆಲಿಸು)

6. ______ ಜೀವಿಸುವುದು ಮಾನವ ಅಭಿಲಾಷೆಯ ಅಂತಿಮ ಗುರಿಯಾಗಿದೆ.
(ಘನತೆಯೊಂದಿಗೆ; ಪರಿಜ್ಞಾನದೊಂದಿಗೆ; ವ್ಯಕ್ತಿಯೊಂದಿಗೆ)

7. ದೀನತೆ ಒಂದು ______
(ನಂಬಿಕೆ; ಕಲೆ; ನಿಷ್ಠೆ)

8. ಶಾಂತಿ ನಿಕೇತನವನ್ನು ಸ್ಥಾಪಿಸಿದವರು ______
(ಬಿ. ಆರ್. ಅಂಬೇಡ್ಕರ್; ಮದರ್ ತೆರೇಸಾ; ರವೀಂದ್ರನಾಥ ಠಾಗೋರ್)

9. ಇದು ಎಲ್ಲರಿಗೂ ಸಿಕ್ಕಿರುವ ಅದ್ಭುತಕರ ಕೊಡುಗೆ ______
(ಮುಖಂಡತ್ವ; ಜೈವಿಕ ಜನನ; ಪ್ರೇರಿತ ಜನನ)

10. ______ ನೈಸರ್ಗಿಕವಾದುದು ಮತ್ತು ಅದರಿಂದ ಯಾರು ಹೊರತಲ್ಲ.
(ಧೈರ್ಯ; ನಂಬಿಕೆ; ಹೆದರಿಕೆ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ: 10x1=10**

1. ಇನ್ನೊಬ್ಬರೊಂದಿಗೆ ಸಂವಾದ ಮಾಡುವಾಗ ನಮ್ಮಲ್ಲಿ ______ ಇರಬೇಕು.
2. ನಮ್ಮ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ನಮ್ಮನ್ನು ಪ್ರೀತಿಸುವವನು _____
3. ನಗಲು ಸಮಯವಿರಲಿ. ಅದು ____________
4. ತಾನು ಸೇರಿದ ಗುಂಪಿನ ಚಟುವಟಿಕೆಗಳಿಗೆ ಪ್ರೇರಣೆ ಕೊಡುವವನು ________
5. ________ ಜೀವನಕ್ಕೆ ಹೊಸತನ ತರುತ್ತದೆ.
6. ಮಾನವ ಘನತೆಯ ಮೂಲ _________
7. ನಮ್ಮ _______ ಸಮಾಜವನ್ನು ನಾವು ಗೌರವಿಸಬೇಕು.
8. ಭಾರತದ ಸಂವಿಧಾನದ ಪ್ರಮುಖ ಶಿಲ್ಪಿ ___________
9. _______ ದೀನತೆ ಪೀಠಿಕೆಯಾಗಿರುತ್ತದೆ.
10. ಪ್ರತಿ ವ್ಯಕ್ತಿ ತನ್ನ ________ ಬಗ್ಗೆ ಪರಿಜ್ಞಾನವುಳ್ಳವನಾಗಿರಬೇಕು.

**III. ಹೊಂದಿಸಿ ಬರೆಯಿರಿ: 5x1=5**

| | | |
|---|---|---|
| 1. ಮಾನವ ಹಕ್ಕುಗಳು | – | ಸಂಪರ್ಕ ಸಾಧಕ |
| 2. ಮುಖಂಡ | – | ಸಮೃದ್ಧಿಯ ಮಂತ್ರ |
| 3. ಕ್ಷಮಾದಾನ | – | ಜೀವಂತ ಸಂತರು |
| 4. ಸಾರ್ವತ್ರಿಕತೆಯ ಸೂತ್ರ | – | ಸಹಜವಾದವು |
| 5. ಮದರ್ ತೆರೆಜಾ | – | ಗೆಳೆತನದ ಗುಣ |

**IV. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ಸಾಮಾಜಿಕ ಪರಿಜ್ಞಾನ ಎಂದರೇನು?
2. ಸಮಾಜ ಸಂವೇದನಾ ಶೀಲತೆಯನ್ನು ನಿನ್ನ ಮಾತಿನಲ್ಲಿ ವಿವರಿಸು.
3. ದೀನತೆಯನ್ನು ನಾವು ಏಕೆ ಸುಗುಣವೆನ್ನುತ್ತೇವೆ?
4. ಆರ್ಥಿಕ ಹಕ್ಕುಗಳು ಯಾವುವು?
5. ಮಾನವೀಯತೆ ಎಂದರೇನು?

**V. ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಐದು ವಾಕ್ಯಗಳಲ್ಲಿ ಉತ್ತರಿಸಿರಿ: 4x5=20**

1. ವಿವಿಧ ರೀತಿಯ ಗೆಳೆಯರ ಲಕ್ಷಣಗಳು ಯಾವುವು?



2. "ಮಾನವನ ಘನತೆಯ" ಬಗ್ಗೆ ಗಾಂಧೀಜಿಯವರಿಗಾದ ಅನುಭವವೇನು?
3. ಮುಖಂಡತ್ವದ ಮೂಲಗಳಾವುವು?
4. ವಿದ್ಯಾರ್ಥಿಗಳು ಸಮಯದ ಸದುಪಯೋಗವನ್ನು ಹೇಗೆ ಮಾಡಬೇಕು?
5. ಸಮಯ ಪೋಲು ಮಾಡುವವರು ಯಾರು?

**VI. ಕೆಳಗಿನ ನಾಲ್ಕು ಪ್ರಶ್ನೆಗಳನ್ನು ಏಳು ವಾಕ್ಯಗಳಲ್ಲಿ ಉತ್ತರಿಸಿರಿ: 4x7=28**

1. ಅನ್ಯಾಯದ ಸಮಾಜ ಎಂದರೇನು? ವಿವರಿಸು.
2. ಗೆಳೆತನವನ್ನು ಕಾಪಾಡುವ ಸೂತ್ರಗಳು ಯಾವುವು?
3. ಪರಿಣಾಮಕಾರಿ ಮುಖಂಡನ ಕೆಲಸ ಕಾರ್ಯಗಳನ್ನು ವಿವರಿಸು.
4. "ನಾವು ಜೀವಿಸುವ ಲೋಕ ಯಾವಾಗಲೂ ನಿಯತ್ತಿನದಲ್ಲ" ಎಂಬುದನ್ನು ಆಫ್ರಿಕಾದ ಒಬ್ಬ ಬಾಲಕನ ಸಾಮತಿಯ ಮೂಲಕ ಸ್ಪಷ್ಟ ಪಡಿಸು.
5. ವಿವಿಧ ಬಗೆಯ ಹಕ್ಕುಗಳನ್ನು ವಿವರಿಸು.
6. ಡಾ। ಬಿ. ಆರ್. ಅಂಬೇಡ್ಕರವರ ಬಗ್ಗೆ ಟಿಪ್ಪಣಿ ಬರೆ.

**VII. ಕೆಳಗಿನ ಯಾವುದಾದರೂ ಒಂದು ವಿಷಯದ ಮೇಲೆ ನಿಮ್ಮ ಅನಿಸಿಕೆ ಬರೆಯಿರಿ: 5x1=5**

1. ಸಮಯ ನಮ್ಮ ಆಸ್ತಿ.
2. ಸ್ವಾರ್ಥಿಗಳ ಗೆಳೆತನ ಅಲ್ಪಕಾಲಿಕ.
3. ಎಲ್ಲಾ ಸುಗುಣಗಳ ಭದ್ರ ಆಸ್ತಿವಾರವೆಂದರೆ ದೀನತೆ.

**VIII. ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿರಿ: 2x6=12**

1. ರಾಜು ಮತ್ತು ರಾಮು ಗೆಳೆಯರು. ಇಬ್ಬರೂ ಎಂಟನೇ ತರಗತಿಯಲ್ಲಿ ಓದುತ್ತಿದ್ದರು. ಮರ, ನಾಯಿ, ಗೋಡೆ ಇತ್ಯಾದಿಗಳ ಮೇಲೆ ತಮಾಷೆಗೆಂದು ಕಲ್ಲು ಬಿಸಾಡುವುದು ರಾಜುವಿನ ದುರಭ್ಯಾಸ. ಹೀಗೆ ಮಾಡಬಾರದೆಂದು ರಾಮು ಗೆಳೆಯನನ್ನು ಎಚ್ಚರಿಸಿದರೂ ಅವನು ಗಮನಿಸಲಿಲ್ಲ. ಒಂದು ದಿನ ಅನಿರೀಕ್ಷಿತವಾಗಿ ಅವನು ಬಿಸಾಡಿದ ಕಲ್ಲು ತರಗತಿಯ ಕಿಟಕಿಯ ಗಾಜನ್ನು ಒಡೆಯಿತು. ಸ್ನೇಹಿತ ರಾಮು ಮಾತ್ರ ಜೊತೆಗಿದ್ದನು. ಶಿಕ್ಷಕರಲ್ಲಿ ಕ್ಷಮೆ ಕೇಳುವಂತೆ ಗೆಳೆಯನಿಗೆ ಒತ್ತಾಯಿಸಿದನು. ಶಿಕ್ಷಕರು ಕೇಳಿದರೆ ತಾನು ನಿಜ ಹೇಳುತ್ತೇನೆಂದು ಹೇಳಿದ ರಾಮುವಿಗೆ, "ನೀನು ನನಗೆ ದ್ರೋಹ ಮಾಡಿದರೆ, ನೀನು ನನ್ನ ಗೆಳೆಯನೇ ಅಲ್ಲ" ಎಂದನು ರಾಜು.